ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ.ಸಚಿವರು):

ಅ) ಯಾದಗಿರಿ ಪಟ್ಟಣವು ಪ್ರಸ್ತಾವಿತ ಉತ್ತರ ಕರ್ನಾಟಕ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿಯಲ್ಲಿ ಸೇರ್ಪಡೆಯಾಗಿದೆ.

ಆ) ಯೋಜನಾ ವರದಿಯ ತಯಾರಿಕೆ ಪ್ರಗತಿಯಲ್ಲಿದೆ. ಅಂತಿಮ ವರದಿಯ ಕರಡು ಸಿದ್ದವಾಗಿದ್ದು, ಅಂತಿಮ ವರದಿಯ ಮಾರ್ಚ್–2005ರ ಒಳಗಾಗಿ ಸಿದ್ದವಾಗಲಿದೆ. ಯೋಜನೆಗಾಗಿ ಹಣಕಾಸಿನ ಹೊಂದಾಣಿಕೆಯನ್ನು ಮಾಡಬೇಕಾಗಿರುತ್ತದೆ. ಅದುದರಿಂದ ಯೋಜನೆಯನ್ನು ಹಣಕಾಸಿನ ಒಪ್ಪಂದದ ನಂತರ ಪ್ರಾರಂಭಿಸಲಾಗುವುದು.

ಇ) ಉದ್ಭವಿಸುವುದಿಲ್ಲ.

379 (692) ಶ್ರೀ ವೀರ್ ಬಸವಂತರೆಡ್ಡಿ ಮುದ್ನಾಳ್ (ಯಾದಗಿರಿ): ಮಾನ್ಯ ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭೀಮರಾಯನಗುಡಿ ಕೃಷ್ಣಾ ಭಾಗ್ಯಜಲ ನಿಗಮದಿಂದ ಕೊನೆ ಹಂತದ ಕಾಲುವೆಗಳಿಗೆ ನೀರು ತಲುಪಿಸಲು ಸಾಧ್ಯವಾಗದೇ ಇರಲು ಕಾರಣಗಳೇನು;

ಆ) ಕೊನೆ ಹಂತದ ಕಾಲುವೆಗಳಿಗೆ ನೀರು ಪೂರೈಸಲು ಸರ್ಕಾರ ಕೈಗೊಂಡ ಕ್ರಮಗಳಾವುವು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು):

ಅ) ಮುಖ್ಯ ಕಾಲುವೆಯ ಮೇಲ್ಭಾಗದ ವಿತರಣಾ ಕಾಲುವೆಗಳಲ್ಲಿ ಕೆಲ ರೈತರು ಅನಧಿಕೃತವಾದ ಬೆಳೆಯಾದ ಭತ್ತ ಬೆಳೆದು ಹೆಚ್ಚುವರಿ ನೀರನ್ನು ಬಳಸುತ್ತಿರುವುದರಿಂದ ಹಾಗೂ ಕಾಲುವೆಯ ಉದ್ದಕ್ಕೂ ಅಲ್ಲಲ್ಲಿ ಕೆಲ ರೈತರು ಅನಧಿಕೃತವಾಗಿ ಪಂಪ್‌ಸೆಟ್‌ಗಳ ಮುಖಾಂತರ ನೀರು ಪಡೆಯುತ್ತಿರುವುದರಿಂದ ಕಾಲುವೆಯ ಕೊನೆ ಹಂತದವರೆಗೆ ನೀರು ತಲುಪಿಸುವಲ್ಲಿ ತೊಂದರೆ ಉಂಟಾಗಿರುತ್ತದೆ.

ಆ)ವಾರಬಂದಿ ಪದ್ಧತಿಯಂತೆ ನೀರನ್ನು ರೈತರಿಗೆ ಒದಗಿಸುವುದನ್ನು ಹಾಗೂ ಅನಧಿಕೃತ ಪಂಪ್‌ಸೆಟ್‌ಗಳನ್ನು ಬಳಸಿ ನೀರನ್ನು ಪಡೆಯುವುದನ್ನು ತಡೆಗಟ್ಟಲು ಕಟ್ಟುನಿಟ್ಟಿನ ಕ್ರಮಗಳನ್ನು ಜರುಗಿಸಲು ಇದಲ್ಲದೇ ಜಿಲ್ಲಾಧಿಕಾರಿಗಳು ಮತ್ತು ಪೊಲೀಸ್ ಇಲಾಖೆಯ ಸಹಾಯವನ್ನೂ ಸಹ ಪಡೆಯುವಂತೆ ಅಧಿಕಾರಿಗಳಿಗೆ ನಿಗಮದಿಂದ ನಿರ್ದೇಶನಗಳನ್ನು ನೀಡಲಾಗಿರುತ್ತದೆ.

380(682) ಶ್ರೀ ವಿಶ್ವನಾಥ್ ಪಾಟೀಲ್ ಹೆಬ್ಬಾಳ್ (ಚಿತ್ತಾಪುರ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿತ್ತಾಪುರ ಮತ ಕ್ಷೇತ್ರದಲ್ಲಿ ಬರುವ ಪೊಲೀಸ್ ಠಾಣೆಗಳಾದ ಕಾಳಗಿ, ಚಿತ್ತಾಪುರ ಶಹಬಾದ್ ಗ್ರಾಮೀಣ ಠಾಣೆಗಳಲ್ಲಿ ಹಂಚಲಾದ ಹಳ್ಳಿಗಳು ತುಂಬಾ ಅವೈಜ್ಞಾನಿಕವಾಗಿದ್ದು, ಈ ಹಳ್ಳಿಗಳ ಪುನರ್ ವಿಂಗಡಣೆ ಮಾಡಲು ಸರ್ಕಾರ ಕೂಡಲೇ ಕ್ರಮ ಕೈಗೊಳ್ಳಲಾಗುವುದೇ;

ಆ) ಇದೆ ಮತ ಕ್ಷೇತ್ರದ ಗುಂಡುಗ್ರತಿ ಅಥವಾ ಮಾದಬೂಳ ಕ್ರಾಸ್ ಹೊಸ ಪೊಲೀಸ್ ಠಾಣೆ ತೆಗೆಯುವುದು ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ ಕೊನೆ ಪಕ್ಷ ಶಹಬಾದ್‌ನ ಗ್ರಾಮೀಣ ಠಾಣೆಯನ್ನು ಈ ಸ್ಥಳಗಳಲ್ಲಿ ವರ್ಗಾಯಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?